## 5 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಹಾಗೂ ಜೆ.ಎಮ್.ಎಫ್.ಸಿ. ನ್ಯಾಯಾಲಯ, ಅಥಣಿ

**ಉಪಸ್ಥಿತರು: ಶ್ರೀ ಚನ್ನಬಸಪ್ಪ ಆರ್ ಕೊಡಿ,**
**ಬಿ.ಎ., ಎಲ್.ಎಲ್.ಬಿ.,**
**5 ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆ.ಮ್.ಎಫ್.ಸಿ, ಅಥಣಿ.**

**ಸಿ.ಸಿ. ನಂ.2133/2018**

**ಪಿರ್ಯಾದಿ:** ಶ್ರೀ ಕೃಷ್ಣಾ ಕೋ-ಆಪರೇಟಿವ ಕ್ರೆಡಿಟ್ ಸೊಸೈಟಿ ಲಿಮಿಟೆಡ್
ಶಾಖೆ: ಕೆಂಪವಾಡ, ತಾ: ಅಥಣಿ, ಜಿ: ಬೆಳಗಾವಿ.

**:ವಿರುದ್ಧ:**

**ಆರೋಪಿ:** ಶ್ರೀಶೈಲ ಪರಪ್ಪಾ ತುಗಶೇಟ್ಟಿ,
ಸಾ: ಮೋಳೆ, ತಾ: ಅಥಣಿ, ಜಿ: ಬೆಳಗಾವಿ.

**: ಆಪಾದನೆ :**

ಆರೋಪಿಯಾದ ನೀವು ಪಿರ್ಯಾದಿ ಸೊಸೈಟಿಯಿಂದ ದಿನಾಂಕ 07.05.2012 ರಂದು ರೂ.1,50,000/-ಗಳನ್ನು ಮತ್ತು ದಿನಾಂಕ 23.11.2012 ರಂದು ರೂ.10,00,000/- ಸಾಲವನ್ನು ಆರು ತಿಂಗಳ ಒಳಗಾಗಿ ಮರುಪಾವತಿಸುವಂತೆ ಹೇಳಿ ಪಡೆದುಕೊಂಡಿದ್ದು, ಸದರಿ ಸಾಲ ಮತ್ತು ಬಡ್ಡಿಯನ್ನು ಮರಳಿ ಪಾವತಿಸುವಂತೆ ಪಿರ್ಯಾದಿಯು ನಿಮ್ಮ ಬಳಿ ಕೇಳಿದಾಗ ಆರೋಪಿಯಾದ ತಾವು ದಿನಾಂಕ 07.03.2018 ರಂದು ರೂ.22,26,874/- ಗಳಿಗೆ ನೀವು ಬೆಳಗಾವಿ ಶಾಖೆಯ ಕರ್ನಾಟಕ ವಿಕಾಸ ಗ್ರಾಮೀಣ ಬ್ಯಾಂಕಿನಲ್ಲಿ ಹೊಂದಿರುವ ಖಾತೆಯ ಚೆಕ್ ನಂ.639341 ನ್ನು ಪಿರ್ಯಾದಿ ಹೆಸರಿಗೆ ನಗದಾಗುವಂತೆ ನೀಡಿರುತ್ತೀರಿ. ಪಿರ್ಯಾದಿಯು ಸದರಿ ಚೆಕನ್ನು ಬ್ಯಾಂಕಿಗೆ ಹಾಜರು ಪಡಿಸಿದಾಗ ಸದರಿ ಚೆಕ್ "Funds Insufficient" ಎಂಬ ಹಿಂಬರಹದೊಂದಿಗೆ ನಗದಾಗದೇ ದಿನಾಂಕ 13.03.2018 ರಂದು ಮರಳಿ ಬಂದಿರುತ್ತದೆ. ನಂತರ ಕಾನೂನು ರೀತ್ಯಾ ದಿ: 04.04.2018 ರಂದು ನಿಮಗೆ ನೋಟಿಸನ್ನು ನೊಂದಾಯಿತ ಅಂಚೆಯ ಮೂಲಕ ನೀಡಿದ್ದು, ಸದರಿ ನೋಟಿಸ ದಿ: 05.04.2018 ರಂದು ನಿಮಗೆ ಜಾರಿಯಾಗಿದ್ದರೂ ಸಹ ನೀವು ಹಣವನ್ನು ಪಾವತಿಸಿಲ್ಲ ಹಾಗೂ ಉತ್ತರವನ್ನು ನೀಡಿಲ್ಲ. ಇದು

Scanned with CamScanner

ಕಲಂ 138 ಮತ್ತು 142 ಎನ್ ಐ ಆಕ್ಟ ಅನ್ವಯ ಈ ನ್ಯಾಯಾಲಯದ ಸಂಜ್ಞಾನದೊಳಗ ಶಿಕ್ಷಾರ್ಹ ಅಪರಾದವೆಸಗಿದ್ದೀರಿ.

**ಅಪಾದನೆ (ಪ್ಲೀ)**

ಪ್ರಶ್ನೆ 1 : ಈ ಮೇಲೆ ಓದಿ ಹೇಳಿದ ಆರೋಪಣೆ ನಿಮಗೆ ತಿಳಿಯಿತೇ?
ಉತ್ತರಃ ತಿಳಿಯಿತು.

ಪ್ರಶ್ನೆ 2: ಸದರಿ ಆರೋಪಣೆಯನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆ ಆಗಬೇಕೆ?
ಉತ್ತರಃ ಸುಳ್ಳು ಇದೆ. ವಿಚಾರಣೆ ಆಗಬೇಕು.

[ಈ ಆರೋಪಣೆಯನ್ನು ಈ ದಿನ ದಿನಾಂಕ 20/11/19 ರಂದು ಆರೋಪಿತನಿಗೆ ತೆರೆದ ನ್ಯಾಯಾಲಯದಲ್ಲಿ ಕನ್ನಡ ಭಾಷೆಯಲ್ಲಿ ಓದಿ ಹೇಳಿ ಆತನ ಉತ್ತರವನ್ನು ಯಥಾವತ್ತಾಗಿ ದಾಖಲಿಸಿದೆ]

ಓ.ಹೇ.ಕೇ. ಸರಿ ಇದೆ.

20/11/19

5 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಅಥಣಿ.

Scanned with CamScanner